4. ಅಭಿನಂದನಾ ಪ್ರಸ್ತಾವ

ವಿಷಯ: ನೂತನ ರಾಷ್ಟ್ರ ಪತಿಗಳಾಗಿ ಆಯ್ಕೆಯಾಗಿರುವ ಶ್ರೀ ಪ್ರಣಬ್ ಮುಖರ್ಜಿ ಅವರಿಗೆ ಅಭಿನಂದನೆ ಸಲ್ಲಿಸುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಪ್ರಣಬ್ ಮುಖರ್ಜಿ ಅವರು ಇವತ್ತು ನಮ್ಮ ರಾಷ್ಟ್ರದ ನೂತನ ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದಾರೆ. ಒಬ್ಬ ಹಿರಿಯ ರಾಜಕಾರಣಿ ಮತ್ತು ಅತ್ಯಂತ ಪ್ರತಿಭಾವಂತ ವ್ಯಕ್ತಿ. ಮೊಟ್ಟಮೊದಲನೆಯದಾಗಿ ಈ ಸದನದಿಂದ ಎಲ್ಲಾ ಸದಸ್ಯರ ಪರವಾಗಿ ನೂತನ ರಾಷ್ಟ್ರಪತಿಗಳಾಗಿ ಆಯ್ಕೆಯಾಗಿರುವ ಮಾನ್ಯ ಪ್ರಣಬ್ ಮುಖರ್ಜಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಷ್ಟ್ರಪತಿಯವರ ಸ್ಥಾನಕ್ಕೆ ಪ್ರಣಬ್ ಮುಖರ್ಜಿಯವರು ಅತ್ಯಂತ ಯೋಗ್ಯವಾದ ವ್ಯಕ್ತಿ. ಶ್ರೀಯುತರ ಇಡೀ ರಾಜಕೀಯ ಜೀವನವನ್ನು ನೋಡಿದಾಗ, ರಾಜಕೀಯ ಜೀವನದಲ್ಲಿ ಬಹಳ ದೊಡ್ಡ ವ್ಯಕ್ತಿತ್ವವನ್ನು ಹೊಂದಿದಂತಹವರು, ಎಲ್ಲಾ ವಿಷಯಗಳಲ್ಲಿಯೂ ಆಳವಾದ ಅನುಭವವನ್ನು ಹೊಂದಿರುವಂತಹ ವ್ಯಕ್ತಿ. ಆರ್ಥಿಕ ವಿಷಯವಾಗಿ ಹಣಕಾಸು ಇಲಾಖೆಗೆ ಸಂಬಂಧಪಟ್ಟಿರಬಹುದು, ಇತರ ಯಾವುದೇ ಇಲಾಖೆಗೆ ಸಂಬಂಧ-ಪಟ್ಟಿರಬಹುದು, ಅದರಲ್ಲಿ ಆಳವಾಗಿ ಅಧ್ಯಯನ ಮಾಡಿಕೊಂಡು, ಅನುಭವದ ಹಿನ್ನೆಲೆಯಲ್ಲಿ ಎಲ್ಲಾ ವಿಷಯದ ಬಗ್ಗೆಯೂ controlಇರುವಂತಹ ವ್ಯಕ್ತಿ ಪ್ರಣಬ್ ಮುಖರ್ಜಿ ಅವರು. ಇತ್ತೀಚಿಗೆ ಬರಗಾಲಕ್ಕೆ ಸಂಬಂಧಿಸಿದಂತೆ ಬಹುಶಃ ಹಿಂದಿನ ಮುಖ್ಯಮಂತ್ರಿಗಳು, ನಾವು-ನೀವು ಎಲ್ಲರೂ ಕೇಂದ್ರಸರ್ಕಾರಕ್ಕೆ ಮನವಿ ಪತ್ರವನ್ನು ಕೊಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರ ಜೊತೆ ಹಲವಾರು ವಿಚಾರಗಳ ಬಗ್ಗೆ ಇಡೀ delegationನಲ್ಲಿರುವಂತಹ ಸದಸ್ಯರೆಲ್ಲರೂ ಚರ್ಚೆ-ಯನ್ನು ಮಾಡಿದ್ದೇವೆ. ನಾವು ಯಾವುದೇ ವಿಷಯದ ಬಗ್ಗೆ ಪ್ರಸ್ತಾಪಿಸಿದಾಗ ಅವರ ಹತ್ತಿರ ಅಂಕಿ ಅಂಶಗಳ ಸಮೇತ ಉತ್ತರಸಿಗುತ್ತಿತ್ತು. ಈ ರೀತಿ ಯಾವುದೇ ಸಣ್ಣ- ಪುಟ್ಟ ವಿಷಯವಿರಬಹುದು, ಕ್ಲಿಷ್ಟಕರವಾದಂತಹ ಸಮಸ್ಯೆಯಿರಬಹುದು, ಎಲ್ಲದಕ್ಕೂ ಸಹಿತ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಉತ್ತರ ಕೊಡು-ವಂತಹ ವ್ಯಕ್ತಿ ಶ್ರೀ ಪ್ರಣಬ್ ಮುಖರ್ಜಿಯವರದ್ದು. ಲೋಕಸಭೆಯಲ್ಲಿಯೂ ಸಹ ಹಲವಾರು ಲೋಕಸಭಾ ಸದಸ್ಯರು ಚರ್ಚೆ ಮಾಡುವುದನ್ನು ನೋಡಿದ್ದೇನೆ. ಆದರೆ ಪ್ರಣಬ್ ಮುಖರ್ಜಿಯವರು ಲೋಕಸಭಾ ಸದಸ್ಯರಿಗೆ ಹಲವಾರು ಸಂದರ್ಭದಲ್ಲಿ ಚರ್ಚೆ ಮಾಡುವ ಸಮಯದಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಅವರು ಸಮಾಧಾನಕರವಾದ ಧಾಟಿಯಲ್ಲಿ ಉತ್ತರ ಕೊಡುವುದನ್ನು ನಾನು ನೋಡಿದ್ದೇನೆ ಮತ್ತು ಏಕೆ ಮಾಡುವುದಕ್ಕಾಗುವುದಿಲ್ಲ

ಎನ್ನುವ ಬಗ್ಗೆ ಉತ್ತರ ಕೊಡುವುದನ್ನು ನೋಡಿದ್ದೇನೆ. ಅತ್ಯಂತ ಚಾಣಾಕ್ಷತನ ಹೊಂದಿರುವವರಿಗೆ ಮಾತ್ರ ಈ ರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿಯ ವ್ಯಕ್ತಿತ್ವವನ್ನು ಮಾನ್ಯ ಪ್ರಣಬ್ ಮುಖರ್ಜಿಯವರು ಹೊಂದಿದ್ದರು. ಇಡೀ ರಾಷ್ಟ್ರದ ಚಿಂತನೆಯ ದೃಷ್ಟಿಯಿಂದ ಇಂತಹ ಒಬ್ಬ ಉತ್ತಮ ವ್ಯಕ್ತಿ ಇವತ್ತು ನಮ್ಮ ದೇಶದ ರಾಷ್ಟ್ರಪತಿಗಳಾಗಿ ಆಯ್ಕೆಯಾಗಿದ್ದಾರೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಭಾರತೀಯ ಜನತಾ ಪಾರ್ಟಿ, ನಾವು ಮಾನ್ಯ ಸಂಗ್ಮಾ ಅವರಿಗೆ ಎನ್.ಡಿ.ಎ. ಯಿಂದ ಬೆಂಬಲವನ್ನು ಕೊಟ್ಟಿದ್ದೆವು. ಇದು ಒಂದು ಸ್ಪರ್ಧೆ ಇರುವ ಹಾಗೆ, ಬೇರೆ ಬೇರೆ ಹಂತದಲ್ಲಿ ಸ್ಪರ್ಧೆಗಳಾಗುತ್ತವೆ. ಅಂತಹ ಸಂದರ್ಭದಲ್ಲಿ ಈ ಸ್ಪರ್ಧೆಯನ್ನು ಮಾಡಿದ್ದೇವೆ. ರಾಷ್ಟ್ರಪತಿ ಸ್ಪರ್ಧೆಯಲ್ಲಿ ಮಾನ್ಯ ಪ್ರಣಬ್ ಮುಖರ್ಜಿಯವರು ಆಯ್ಕೆಯಾದ ಮೇಲೆ, ಅವರು ಇಡೀ ರಾಷ್ಟ್ರದ ರಾಷ್ಟ್ರಪತಿಗಳಿವರು, ಅಂತಹ ವ್ಯಕ್ತಿ ಇವತ್ತು ರಾಷ್ಟ್ರಪತಿ ಭವನದಲ್ಲಿ ಕುಳಿತು ಕೊಳ್ಳುವುದರಿಂದ, ರಾಷ್ಟ್ರಪತಿ ಭವನದಲ್ಲಿ ಹಲವಾರು ವಿಷಯಗಳು ಪೆಂಡಿಂಗ್ ಇವೆ, ಅವುಗಳನ್ನು ಇತ್ಯರ್ಥ ಮಾಡುವುದಕ್ಕೆ ಅವರಿಂದ ಸಾಧ್ಯವಾಗುತ್ತದೆ. ಆ ಒಂದು ರಾಷ್ಟ್ರಪತಿ ಭವನಕ್ಕೆ ಗೌರವ ಕೊಡುವಂತಹ ವ್ಯಕ್ತಿ ಪ್ರಣಬ್ ಮುಖರ್ಜಿಯವರು. ಅದಕ್ಕಾಗಿ ಮತ್ತೊಮ್ಮೆ ಅವರಿಗೆ ಸದನದ ಎಲ್ಲಾ ಸದಸ್ಯರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯುನ್ನತ ಸ್ಥಾನ ರಾಷ್ಟ್ರಪತಿ ಸ್ಥಾನ. ಈ ಸ್ಥಾನಕ್ಕೆ ನೆನ್ನೆ ತಾನೇ ಚುನಾವಣಾ ಫಲಿತಾಂಶ ಹೊರಬಿದ್ದು, ಮಾನ್ಯ ಪ್ರಣಬ್ ಮುಖರ್ಜಿಯವರು ಅತ್ಯಂತ ಹೆಚ್ಚು ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಒಟ್ಟು ಮತಗಳ ಸಂಖ್ಯೆಯಲ್ಲಿ ಶೇ. 69 ರಷ್ಟು ಮತಗಳನ್ನು ಪಡೆದು, ವಿರೋಧಪಕ್ಷದಲ್ಲಿರುವಂತಹUPAಗೆ ವಿರುದ್ಧವಾಗಿರುವಂತಹ ಪಕ್ಷಗಳ ಮತ–ಗಳನ್ನು ಕೂಡ ಪಡೆದಿರುವುದು ಈ ಸಾರಿಯ ವಿಶೇಷವಾಗಿದೆ. ಶಿವಸೇನೆ ಪಕ್ಷದವರೂ ಕೂಡ ಮತ ಚಲಾಯಿಸಿದ್ದಾರೆ, ಬಿಹಾರದಲ್ಲಿ ಜೆ.ಡಿ.(ಯು) ಅವರು, ಕಮ್ಯೂನಿಸ್ಟ್ ಪಾರ್ಟಿ ಯವರೂ ಸಹ ಮತ ಚಲಾಯಿಸಿದ್ದಾರೆ. ಕೇರಳದಲ್ಲಿ 100ಕ್ಕೆ 100 ರಷ್ಟು ಮತ ಹಾಕಿದ್ದಾರೆ. ಇವುಗಳೆಲ್ಲವನ್ನೂ ನೋಡಿದಾಗ ಇವರು ಎಲ್ಲಾ ಪಕ್ಷಗಳಲ್ಲಿಯೂ ಕೂಡ ವಿಶ್ವಾಸ ಸ್ನೇಹ, ಗೌರವವನ್ನು ಪಡೆದು ಕೊಂಡಿರುವಂತಹ ಒಬ್ಬ ಸೂಕ್ತ ವ್ಯಕ್ತಿ ಅತ್ಯುನ್ನತ ಸ್ಥಾನಕ್ಕೆ ಆಯ್ಕೆಯಾಗಿ–ರುವುದನ್ನು ನಾವು ತಿಳಿದುಕೊಳ್ಳಬೇಕು. ಪ್ರಣಬ್ ಮುಖರ್ಜಿಯವರು ಈ ದೇಶದ ರಾಜಕಾರಣದಲ್ಲಿ ಸುಮಾರು ಐದು ದಶಕಗಳ ಕಾಲ ಸೇವೆ ಮಾಡಿದ್ದಾರೆ. ರಾಜ್ಯ ಸಭಾ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ, ಕೇಂದ್ರದಲ್ಲಿ

ಅನೇಕ ಪ್ರಾಮುಖ್ಯವಾದಂತಹ ಇಲಾಖೆಗಳನ್ನು ನಿರ್ವಹಿಸಿದ್ದಾರೆ. ಹಣಕಾಸಿನ ಇಲಾಖೆ, ರಕ್ಷಣಾ ಇಲಾಖೆ, ಯೋಜನಾ ಇಲಾಖೆ ಮತ್ತು ಯೋಜನಾ ಮಂಡಳಿಯ ಉಪಾಧ್ಯಕ್ಷರಾಗಿ ಕೂಡ ಕೆಲಸ ಮಾಡಿದ್ದಾರೆ. ಅವರನ್ನು 'ಟ್ರಬಲ್ ಶೂಟರ್' ಎಂದು ಕರೆಯುತ್ತಿದ್ದರು. ಪಾರ್ಲಿಮೆಂಟ್‌ನಲ್ಲಿ, ಸರ್ಕಾರದಲ್ಲಿ ಯಾವುದೇ ಸಂದರ್ಭದಲ್ಲಿ ಜಿಜ್ಞಾಸೆ ಬಂದಂತಹ ಸಮಯದಲ್ಲಿ ಅದನ್ನು ಬಗೆಹರಿಸುವುದರಲ್ಲಿ ಒಂದು ನಿಪುಣತೆಯನ್ನು ಪಡೆದುಕೊಂಡಿದ್ದರು. ಯು.ಪಿ.ಎ. ಸರ್ಕಾರವಾಗಲಿ, ಅಥವಾ ಬೇರೆ ಯಾವುದೇ ಕಾಂಗ್ರೆಸ್ ಸರ್ಕಾರ ಇರುವಂತಹ ಸಂದರ್ಭದಲ್ಲಿ ವಿರೋಧ ಪಕ್ಷಗಳ ಜೊತೆಗೆ ಸಂಧಾನ ಮಾಡುವುದಕ್ಕೆ, ಅದನ್ನು ಬಗೆಹರಿಸುವುದಕ್ಕೆ ಇವರದೇ ಒಂದು ನಿಯೋಗ ಮಾಡುತ್ತಿದ್ದರು. ಅಷ್ಟರಮಟ್ಟಿಗೆ ಇವರು ಒಬ್ಬ ಮೇಧಾವಿ, ಮುತ್ಸದ್ಧಿ ರಾಜಕಾರಣಿ ಎನ್ನುವುದನ್ನು ಇಂದು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ಅಂತಹ ಒಬ್ಬ ಮೇಧಾವಿ, ಮುತ್ಸದ್ಧಿ, ಬಹಳ ಅನುಭವ, ಜ್ಞಾನ ಇರತಕ್ಕಂತಹವರು ಯಾವುದೇ ವಿಚಾರದ ಬಗ್ಗೆ ಬಹಳ ಅಪಾರವಾದ ಜ್ಞಾನವನ್ನು ಪಡೆದುಕೊಂಡಿದ್ದರು. ಅನುಭವದಿಂದ ಓದಿ ತಿಳಿದುಕೊಂಡು ಬಹಳಷ್ಟು ಜ್ಞಾನವನ್ನುಪಡೆದಿರುವಂತಹ ವ್ಯಕ್ತಿಯಾಗಿದ್ದಾರೆ, ದೇಶದ ಹಣಕಾಸಿನ ಪರಿಸ್ಥಿತಿ ಬಗ್ಗೆ, ಬೇರೆ ಬೇರೆ ಯೋಜನೆಗಳ ಬಗ್ಗೆ ಅನೇಕ ಸಾರಿ ಇವರ ಜೊತೆ ಚರ್ಚೆ ಮಾಡಿದ್ದೇವೆ. ಯಾವುದೇ ವಿಷಯದ ಬಗ್ಗೆ ಕೂಡ ಅವರಿಗೆ ಒಂದು ಅಥಾರಿಟೀವ್ ಆಗಿ ಮಾತನಾಡುವಂತಹ ಶಕ್ತಿಯಿತ್ತು. ಅಂತಹ ಒಬ್ಬ ವ್ಯಕ್ತಿ ರಾಷ್ಟ್ರದ ಅತ್ಯುನ್ನತ ಸ್ಥಾನಕ್ಕೆ ಆಯ್ಕೆಯಾಗಿರುವಂತಹದು ಇಡೀ ದೇಶದ 113 ಕೋಟಿ ಜನರಿಗೆ ಸಂತಸವನ್ನುಂಟುಮಾಡಿದೆಯೆಂದು ನಾನು ಭಾವಿಸುತೇನೆ. ಕರ್ನಾಟಕದಲ್ಲಿ ನಮ್ಮ ಪಕ್ಷದ ಶಕ್ತಿ ಕಡಿಮೆ ಇತ್ತು. ಭಾರತೀಯ ಜನತಾಪಕ್ಷದಲ್ಲಿ ನಮಗಿಂತ ಜಾಸ್ತಿ ಸದಸ್ಯರು ಇದ್ದರು. ಆದರೂ ಕೂಡ ಅನೇಕ ಜನರು ಸುಮಾರು 15-16 ಜನ ಭಾರತೀಯ ಜನತಾ ಪಕ್ಷದ ಶಾಸಕರು ಪ್ರಣಬ್ ಮುಖರ್ಜಿಯವರಿಗೆ ಓಟು ಹಾಕಿದ್ದಾರೆ. ಏಕೆಂದರೆ ಮಾನ್ಯ ಪ್ರಣಬ್ ಮುಖರ್ಜಿಯವರಿಗೆ 117 ಮತಗಳು ಬಂದಿವೆ. Independents,ಜೆ.ಡಿ.-(ಎಸ್)ನವರು ಮತ್ತು ನಮ್ಮ ಪಕ್ಷದ ಸದಸ್ಯರು ಕ್ರಮವಾಗಿ 5,26,71 ಹೀಗೆ ಒಟ್ಟು 102 ಆಗುತ್ತದೆ, ಆದರೂ ನಮಗೆ 117 ಸ್ಥಾನಗಳು ಬಂದಿವೆ. ಬಿಜೆಪಿಯವರು ಕೂಡ ಪಾಪ ಸ್ವಯಂಪ್ರೇರಿತರಾಗಿ, ಅವರ ಸರ್ಕಾರಕ್ಕೆ ವಿರುದ್ಧವಾಗಿ ಮತ ಹಾಕಿದ್ದಾರೆ. ಜೆಡಿಎಸ್ ರವರೆ ನಿಮಗೆ ಅಭಿನಂದನೆಗಳು, 26 ಕ್ಕೆ 26 ಹಾಕಿದ್ದೀರಿ. Subject to correction. ನಾನು ಬಿಜೆಪಿ ಅನ್ನುವುದಕ್ಕೆ ಜೆಡಿ(ಎಸ್) ಎಂದುಬಿಟ್ಟಿದ್ದೇನೆ. ಬಿಜೆಪಿಯವರೂ ಕೂಡ ಹಾಕಿದ್ದಾರೆ. ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ,ಬಿಜೆಪಿಯವರಿಗೆ ಕೂಡ ಅಭಿನಂದನೆಗಳನ್ನು ಹೇಳಬೇಕು.

ನಾವು ನೀರೀಕ್ಷೆ ಮಾಡಿರಲಿಲ್ಲ. ಆ ನಿರೀಕ್ಷೆ ಮಾಡದ ಮತಗಳು ಬಂದಿವೆಯಲ್ಲ ಹಾಗಾಗಿ ಅವರಿಗೂ ಕೂಡ ಅಭಿನಂದನೆ ಹೇಳುತ್ತೇನೆ. ಇವತ್ತು ಇಡೀ ಸದನದ ಎಲ್ಲಾ ಸದಸ್ಯರಿಗೆ ಬಹಳ ಸಂತೋಷವಾಗಿದೆ. ಸದನದ ಪರವಾಗಿ ಮಾನ್ಯ ಪ್ರಣಬ್ ಮುಖರ್ಜಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮಗೆಲ್ಲರಿಗೂ ವಿಶ್ವಾಸ ಇದೆ. ನಮ್ಮ ರಾಷ್ಟ್ರದ ಗೌರವನ್ನು, ಸಂವಿಧಾನವನ್ನು ಎತ್ತಿ ಹಿಡಿಯುವುದರಲ್ಲಿ, ನಮ್ಮ ರಾಷ್ಟ್ರದ ಗೌರವನ್ನು ಎತ್ತಿಹಿಡಿಯುವುದರಲ್ಲಿ ಅವರು ಸಮರ್ಥವಾಗಿ ಮಾಡುತ್ತಾರೆ. ಹಾಗೂ ರಾಷ್ಟ್ರಕ್ಕೆ ಗೌರವವನ್ನು ತಂದುಕೊಡುತ್ತಾರೆ. ಎನ್ನತಕ್ಕಂಥ ವಿಶ್ವಾಸದೊಂದಿಗೆ ಮತ್ತೊಮ್ಮೆ ಅವರಿಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು:ಹೆಚ್.ಡಿ.ರೇವಣ್ಣ ನವರೆ, ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ(ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ರಾಷ್ಟ್ರದ ಅತ್ಯುನ್ನತ ರಾಷ್ಟ್ರಪತಿ ಹುದ್ದೆಗೆ ನಮ್ಮ ದೇಶದ ಹಿರಿಯ ಮುತ್ಸದ್ದಿ ರಾಜಕಾರಣಿಯಾದಂತಹ ಮಾನ್ಯ ಪ್ರಣಬ್ ಮುಖರ್ಜಿಯವರು ಆಯ್ಕೆ ಆಗಿರುವುದಕ್ಕೆ ಮೊದಲನೆಯದಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಪ್ರಣಬ್ ಮುಖರ್ಜಿಯವರು ಇಡೀ ರಾಷ್ಟ್ರದ ಎಲ್ಲ ಪಕ್ಷಗಳ ವಿಶ್ವಾಸವನ್ನು ಗಳಿಸಿ, ಈ ರಾಷ್ಟ್ರದ ಅತ್ಯುನ್ನತ ಹುದ್ದೆಗೆ ಆಯ್ಕೆಯಾಗಿದ್ದಾರೆ. ಅವರು ವಿದೇಶಾಂಗದ ಸಚಿವರಾಗಿ ಇರಬಹುದು, ಹಣಕಾಸು ಸಚಿವರಾಗಿ ಇರಬಹುದು, ರಕ್ಷಣಾ ಸಚಿವರಾಗಿ ಇರಬಹುದು, ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಮತ್ತು ಐದು ಬಾರಿ, ಐದು ದಶಕಗಳ ರಾಜಕೀಯ ಜೀವನದಲ್ಲಿ ಒಬ್ಬ ಹಿರಿಯ ಮುತ್ಸದ್ದಿ ರಾಜಕಾರಣಿಯಾದ ಪ್ರಣಬ್ ಮುಖರ್ಜಿಯವರು ಆಯ್ಕೆ ಆಗಿರುವುದು ಸಂತೋಷದ ವಿಷಯ ಎಂದು ಹೇಳಬೇಕಾಗಿದೆ. ಮತ್ತು ಅದರ ಜೊತೆಗೆ ಇವತ್ತು ರಾಷ್ಟ್ರದ ಎಲ್ಲ ಪಕ್ಷಗಳಿರಬಹುದು, ಎಲ್ಲ ವಿರೋಧ ಪಕ್ಷವಾಗಿರಬಹುದು ಮತ್ತು ಎನ್.ಡಿ.ಎ. ಅಂಗ ಪಕ್ಷಗಳ ವಿಶ್ವಾಸವನ್ನು ಗಳಿಸಿ, ಇವತ್ತು ಸುಮಾರು 7ಲಕ್ಷದ 13 ಸಾವಿರ ಹೆಚ್ಚಿನ ಮತದ ಅಂತರದಲ್ಲಿ ಆಯ್ಕೆಯಾಗಿದ್ದಾರೆ. ಅದರ ಜೊತೆಗೆ ನಮ್ಮ ಪಕ್ಷದ ವತಿಯಿಂದ 26 ಇತ್ತು ಆ ಮತಗಳನ್ನೂ ನಾವು ಮಾನ್ಯ ಪ್ರಣಬ್ ಮುಖರ್ಜಿಯವರಿಗೆ ಕೊಟ್ಟಿದ್ದೇವೆ. 3 ಎಂಪಿಗಳು ಸೇರಿ ಒಟ್ಟು 29 ಮತಗಳನ್ನು ಕೊಟ್ಟಿದ್ದೇವೆ. ಅದರ ಜೊತೆಗೆ ಇವತ್ತು ನಮ್ಮ ರಾಜ್ಯದ ಆಡಳಿತಾರೂಢ ಬಿಜೆಪಿ ಪಕ್ಷದ ಸುಮಾರು 14 ಜನ ಶಾಸಕರುಗಳು, ಅದರಲ್ಲಿ 3 ಜನ ಶಾಸಕರು ಮನಸ್ಸಿಲ್ಲದೆ, ಒಟ್ಟು 17 ಜನ, ತಿರಸ್ಕೃತವಾಗಿತರುವುದು ಸೇರಿ 17 extra ಓಟ್ಗಳು ಬಂದಿವೆ. ಮಾನ್ಯ ಪ್ರಣಬ್ ಮುಖರ್ಜಿಯವರು ನಮ್ಮ ರಾಜ್ಯದಲ್ಲಿಯ ಆಡಳಿತ ಪಕ್ಷವಾದ ಬಿಜೆಪಿಯ ವಿಶ್ವಾಸವನ್ನು ತೆಗೆದುಕೊಂಡು ಅತಿ ಉನ್ನತ

ಹುದ್ದೆಗೆ ಆಯ್ಕೆಯಾಗಿದ್ದಾರೆ, ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸಿ, ಅವರು ಈ ರಾಷ್ಟ್ರದಲ್ಲಿ ಮುಂದಿನ ಐದು ವರ್ಷಗಳ ಕಾಲ ಸಂವಿಧಾನದ ಗೌರವವನ್ನು ಎತ್ತಿಹಿಡಿಯುವಂತೆ ಮಾಡುತ್ತಾರೆಂದು ಅವರ ಆಯ್ಕೆಗೆ ಸಂಪೂರ್ಣವಾಗಿ ನಮ್ಮ ಪಕ್ಷದ ವತಿಯಿಂದ ಅಭಿನಂದನೆಯನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರು, ಮಾತನಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ(ಶಿಕಾರಿಪುರ): ಸನ್ಮಾನ್ಯ ಸಭಾಧ್ಯಕ್ಷರೆ: ಇವತ್ತು ಮಾನ್ಯ ಪ್ರಣಬ್ ಮುಖರ್ಜಿಯವರು ಈ ದೇಶದ 113 ಕೋಟಿ ಜನರ ಒಬ್ಬ ಪ್ರತಿನಿಧಿಯಾಗಿ, ಈ ದೇಶದ ರಾಷ್ಟ್ರಪತಿಯಾಗಿ ದಿನಾಂಕ:25.07.2012 ರಂದು ಅಧಿಕಾರ ಸ್ವೀಕಾರ ಮಾಡುತ್ತಿರುವಂಥದ್ದು ಹಾಗೂ ನಿನ್ನೆ ಫಲಿತಾಂಶ ಬಂದಾಗ ಶೇಕಡ 69 ಕ್ಕೂ ಹೆಚ್ಚು ಮತವನ್ನು ಪಡೆದು ಗೆದ್ದಿರುವಂಥದ್ದು ನಮ್ಮೆಲ್ಲರಿಗೂ ಸಹಜವಾಗಿ ಸಂತೋಷವಾಗಿದೆ. ಬಹುಶಃ ಈ ದೇಶದಲ್ಲಿ ಅತ್ಯಂತ ಉನ್ನತ ಹುದ್ದೆ ರಾಷ್ಟ್ರಪತಿ ಹುದ್ದೆ. ಆ ಸ್ಥಾನಕ್ಕೆ ಆಯ್ಕೆಯಾದಂಥ ಸಂದರ್ಭದಲ್ಲಿ ಎಲ್ಲಾ ಪಕ್ಷದವರು ಒಂದಾಗಿ ಸರ್ವಾನುಮತದಿಂದ ಆಯ್ಕೆ ಮಾಡುವಂತಹ ಒಂದು ಚಿಂತನೆ ನಡೆಯಬೇಕಾಗಿತ್ತು. ಬಹುಶಃ ಮುಂದಾಲೋಚನೆ ಕೊರತೆ ಅಥವಾ ಪರಸ್ಪರ ಭಿನ್ನಾಭಿಪ್ರಾಯಗಳು, ಬೇರೆ ಬೇರೆ ಕಾರಣಕ್ಕಾಗಿ ಅನಿವಾರ್ಯ–ವಾಗಿ ಚುನಾವಣೆ ನಡೆದುಹೋಯಿತು. ಈ ದೇಶದ ಮೂರು ಆರ್ಮಿಗಳ ಕಮ್ಯಾಂಡರ್ ಅವರು ಆಗುತ್ತಾರೆ. ಅದು ಉನ್ನತ ಸ್ಥಾನ. 21ನೇ ಶತಮಾನವೆಂದು ಹೇಳಿದರೆ, ಭಾರತೀಯರ ಶತಮಾನವೆಂದು ಜಗತ್ತು ನಮ್ಮ ಕಡೆಗೆ ನೋಡುತ್ತಿರುವ ಈ ಕಾಲದಲ್ಲಿ ದೂರದೃಷ್ಟಿ ಇರುವಂಥ ಒಬ್ಬ ಮೇಧಾವಿ ಪ್ರಣಬ್ ಮುಖರ್ಜಿ ಅಂಥ ಅವರು ಈ ರಾಷ್ಟ್ರದ ರಾಷ್ಟ್ರಪತಿ ಆಗುತ್ತಿರುವುದು ನಮ್ಮೆಲ್ಲರ ಸೌಭಾಗ್ಯ–ವೆಂದು ನಾನು ಭಾವಿಸಿದ್ದೇನೆ. ಬಹುಶಃ ಮಾನ್ಯ ಬಾಬು ರಾಜೇಂದ್ರ ಪ್ರಸಾದ್‌ರವರು, ಮಾನ್ಯ ಎಸ್. ರಾಧಾಕೃಷ್ಣನ್‌ರವರು, ಮಾನ್ಯ ಅಬ್ದುಲ್ ಕಲಾಂಜೀ ಅವರುಗಳ ನಂತರ ನಾವು ನೋಡುತ್ತಿರುವಂಥ ಅಪರೂಪದ ಒಬ್ಬ ವ್ಯಕ್ತಿ ಪ್ರಣಬ್ ಮುಖರ್ಜಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮನೆಯ ಮೂಲಕ ಅವರ ಪ್ರತಿಸ್ಪರ್ಧಿಯಾದಂಥ ಮಾನ್ಯ ಪಿ.ಎ.ಸಂಗ್ಮಾ ಅವರನ್ನು ವಿನಂತಿ ಮಾಡುವುದಿಷ್ಟೇ ಇಂಥ ಅತ್ಯುನ್ನತ ಉನ್ನತ ಸ್ಥಾನಕ್ಕೆ 69% ಗೂ ಹೆಚ್ಚು ಮತಗಳನ್ನು ಪಡೆದು ಆಯ್ಕೆಯಾಗಿರುವಂಥ ಸಂದರ್ಭದಲ್ಲಿ ಸುಪ್ರೀಂಕೋರ್ಟ್‌ಗೆ ನಾನು ತಕರಾರು ಅರ್ಜಿ ಹಾಕುತ್ತೇನೆಂದು ಹೇಳುವುದು ಸರಿಯಲ್ಲ. ನಾನು ಈ ದೇಶದ ಜನರನ್ನು ಕಣ್ಣು ಮುಂದೆ ಇಟ್ಟುಕೊಂಡು ಅತ್ಯಂತ ವಿನಯದಿಂದ ಅನುಭವವಿರುವ ಪಿ.ಎ.ಸಂಗ್ಮಾ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಆ ದುಸ್ಸಾಹಸಕ್ಕೆ ಕೈ ಹಾಕಬೇಡಿ.

ಜಗತ್ತು ನಮ್ಮ ಕಡೆ ನೋಡುತ್ತಿದೆ. ಇಂಥ ಅತ್ಯಂತ ಉನ್ನತ ಸ್ಥಾನಕ್ಕೆ ಆಯ್ಕೆಯಾದರೂ ಸಹ ತಕರಾರು ಮಾಡುವಂಥ ಈ ಪ್ರವೃತ್ತಿ ಏನಿದೆ, ಇದು ಭಾರತೀಯರಿಗೆ ಶೋಭೆ ತರುವಂಥದ್ದಲ್ಲವೆಂದು ಹೇಳಿ ನಮ್ಮ ಬಗ್ಗೆ ಜಗತ್ತಿನಲ್ಲಿ ಬೇರೆ ತರಹ ಮಾತನಾಡುವ ಅವಕಾಶ ಆಗಬಹುದು. ಅದಕ್ಕಾಗಿ ನಾನು ಸನ್ಮಾನ್ಯ ಪಿ.ಎ.ಸಂಗ್ಮಾ ಅವರಿಗೆ ಪತ್ರವನ್ನು ಬರೆಯುತ್ತೇನೆ. ಈ ಮನೆಯ ಮೂಲಕ ಪ್ರಾರ್ಥನೆಯನ್ನೂ ಮಾಡುತ್ತೇನೆ. ಏನೇ ಕಾರಣಗಳು ಇದ್ದರೂ ಸಹ ನಿನ್ನೆ ನೀವು ಅವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದೀರಿ. ಆದುದರಿಂದ ತಾವು ಈ ಒಂದು ದುಸ್ಸಾಹಸಕ್ಕೆ ಕೈ ಹಾಕಬಾರದು. ನಿಜಕ್ಕೂ ಸಹ ಇಂಥ ಕೆಲಸದಿಂದ ದೂರ ಸರಿದರು ಎಂದರೆ ಇಡೀ ದೇಶದ 113 ಕೋಟಿ ಜನರಿಗೆ ಗೊತ್ತಾದರೆ ನಿಮಗೂ ಕೂಡ ಗೌರವ ಹೆಚ್ಚು ಆಗುತ್ತದೆಂದು ನಾನು ಭಾವಿಸಿದ್ದೇನೆ. ಈ ಪ್ರಾರ್ಥನೆಯನ್ನು ಈ ಸಂದರ್ಭದಲ್ಲಿ ಮಾಡಿ, ಮಾನ್ಯ ಸಿದ್ದರಾಮಯ್ಯನವರು ಸೂಕ್ತ ಕಾಲದಲ್ಲಿ ಇದನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿ, ಸಭಾನಾಯಕರು ಈ ಮನೆಯ ಮೂಲಕ ಅಭಿನಂದನೆಯನ್ನು ಸಲ್ಲಿಸುವಂಥ ಒಂದು ಪರಿಪಾಠ ಹಾಕಿ ಕೊಟ್ಟಿರುವಂಥದ್ದು ಮತ್ತು ದೇಶದಲ್ಲಿ ಮೊದಲ ಬಾರಿಗೆ ವಿಧಾನಮಂಡಲದ ಕಾರ್ಯಕಲಾಪಗಳು ನಡೆಯುವಂಥ ಸಂದರ್ಭದಲ್ಲಿ ಅವರು ಇನ್ನೂ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕಾರ ಮಾಡುವ ಮುಂಚೆಯೇ ಈ ಮನೆಯಲ್ಲಿ ಅಭಿನಂದನೆ ಸಲ್ಲಿಸುವಂಥ ಅವಕಾಶ ಸಿಕ್ಕಿರುವುದು ಏನೋ ಒಂದು ವಿಶೇಷವಾದ ಅಪರೂಪದ ಕಾರಣವೆಂದು ನಾನು ಭಾವಿಸಿದ್ದೇನೆ. ಅದಕ್ಕಾಗಿ ಸನ್ಮಾನ್ಯ ಅಧ್ಯಕ್ಷರು ಇಲ್ಲಿ ನಡೆದಂಥ ಈ ಮನೆಯ ಒಂದು ತೀರ್ಮಾನವನ್ನು ರಾಷ್ಟ್ರಪತಿಯವರಿಗೆ ಕಳುಹಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿ, ನಾನು ಈ ಸಂದರ್ಭದಲ್ಲಿ ಮತ್ತೊಮ್ಮೆ ಈ ಉನ್ನತ ಸ್ಥಾನಕ್ಕೆ ಏರಿ ಈ ದೇಶದ ಘನತೆ, ಗೌರವನ್ನು ಎತ್ತಿ ಹಿಡಿಯುವಂಥ ಸಮರ್ಥ ವ್ಯಕ್ತಿ ಆ ಸ್ಥಾನಕ್ಕೆ ಬಂದಿರುವುದರಿಂದ ಅವರಿಗೆ ಈ ಸಂದರ್ಭದಲ್ಲಿ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಟಿ.ಬಿ.ಜಯಚಂದ್ರರವರು ಮಾತನಾಡಿ.

ಶ್ರೀ ಟಿ.ಬಿ.ಜಯಚಂದ್ರ(ಸಿರಾ): ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸಭಾ-ನಾಯಕರು, ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ರೇವಣ್ಣನವರು ಮತ್ತು ಸನ್ಮಾನ್ಯ ಯಡಿಯೂರಪ್ಪನವರ ಮಾತು ನಿಜವಾಗಿಯೂ ಕೂಡ ಅವರ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೂಡ ಮಾಡಿಕೊಟ್ಟಿದ್ದೀರಿ. ಮಾನ್ಯ ಪ್ರಣಬ್ ಮುಖರ್ಜಿಯವರು ಈ ರಾಷ್ಟ್ರದ ಅತ್ಯುನ್ನತವಾಗಿರುವ ರಾಷ್ಟ್ರಾಧ್ಯಕ್ಷರ ಹುದ್ದೆಗೆ ಆಯ್ಕೆಯಾಗಿರುವಂಥದ್ದು, ಆಯ್ಕೆಯಾಗಿರತಕ್ಕಂಥ ಸಂದರ್ಭದಲ್ಲಿ ನಾವೆಲ್ಲರೂ ನೋಡಿದ ರೀತಿಯಲ್ಲಿ ಈ ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ

ಸಂಸತ್ ಸದಸ್ಯರು ಇರಬಹುದು, ಶಾಸಕರು ಇರಬಹುದು, ಅವರು ಪಕ್ಷಕ್ಕಿಂತ ದೇಶ ಮುಖ್ಯ, ಎಲ್ಲದಕ್ಕಿಂತಲೂ ಕೂಡ ದೇಶವನ್ನು ಮುನ್ನಡೆಸುವಂಥ ವ್ಯಕ್ತಿ ಮುಖ್ಯ ಎನ್ನುವುದನ್ನು ಸಾಬೀತು ಮಾಡತಕ್ಕ ರೀತಿಯಲ್ಲಿ ಇವತ್ತು ಚುನಾವಣೆ ನಡೆದಿದೆ. ಶ್ರೀ ಪ್ರಣಬ್ ಮುಖರ್ಜಿಯವರು ಅತ್ಯಧಿಕವಾಗಿರತಕ್ಕ ಬಹುಮತದಿಂದ ಆಯ್ಕೆಯಾಗಿರುವುದು ಬಹು ಸಂತೋಷದ ಸಂಗತಿ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ ಬಹುಶಃ ಶ್ರೀ ಪ್ರಣಬ್ ಮುಖರ್ಜಿಯವರು ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯನವರ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದೇ ಅವರ ಕೊನೆಯ ಸಭೆ. ಅಗಲೇ ಎಲ್ಲರಲ್ಲೂ ಗುಸು ಗುಸು ಇತ್ತು. ಬಹುಶಃ ಇದು ಕೊನೆಯ ಸಭೆ ಆಗುತ್ತದೆ, ನಂತರ ಅವರು ರಾಷ್ಟ್ರಾಧ್ಯಕ್ಷರಾಗಿ ಬರುತ್ತಾರೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದರು. ಅದರ ಜೊತೆಗೆ ಕೆಲವರು ಸಲಹೆಯನ್ನೂ ಕೊಡುತ್ತಿದ್ದರು, ಅವರು ಹೇಗಿದ್ದರೂ ರಾಷ್ಟ್ರಾಧ್ಯಕ್ಷರಾಗಿ ಬರುತ್ತಾರೆ, ಆಗ ವಿಧಾನಸಭೆಗೆ ಕರೆಯುವಂಥ ಚಿಂತನೆ ಮಾಡಬೇಕು ಎನ್ನುವಂಥ ಮಾತನ್ನು ಸಹ ಹೇಳುತ್ತಿದ್ದರು. ಹಾಗಾಗಿ ಇವತ್ತು ಎಲ್ಲರೂ ಕೂಡ ಪ್ರಶಂಸೆ ಮಾಡತಕ್ಕ ರೀತಿಯಲ್ಲಿ ಅವರು ರಾಷ್ಟ್ರಾಧ್ಯಕ್ಷರಾಗಿ ಆಯ್ಕೆಯಾಗಿರುವುದು, ಬಹಳ ಮುಖ್ಯವಾಗಿ ಶ್ರೀ ಪ್ರಣಬ್ ಮುಖರ್ಜಿಯವರ ಆಯ್ಕೆಯನ್ನು ಇಡೀ ಪ್ರಪಂಚದ ಎಲ್ಲಾ ರಾಷ್ಟ್ರಗಳು ಕೂಡ ಇವತ್ತು ಸ್ವಾಗತಿಸುತ್ತವೆ ಎಂದು ನಾನು ಭಾವಿಸುತ್ತೇನೆ. ಜಾಗತಿಕ ಮಟ್ಟದ ಆರ್ಥಿಕ ಕುಸಿತ ಇವತ್ತಿನ ಒಂದು ದೊಡ್ಡ Challengeಆಗಿದ್ದು, ಪ್ರಪಂಚದ ಮುಂದೆ ಇರುವ ದೊಡ್ಡ ಸವಾಲಾಗಿದೆ. ಆ ಸವಾಲನ್ನು ಎದುರಿಸಬೇಕಾದಾಗ ಅಮೇರಿಕಾದಂಥ ದೇಶಗಳೇ ತತ್ತರಿಸಿ ಹೋಗಿರುವ ಹಿನ್ನೆಲ್ಲೆಯಲ್ಲಿ, ಇವತ್ತು ಶ್ರೀ ಪ್ರಣಬ್ ಮುಖರ್ಜಿಯವರು 5 ದಶಕಗಳ ಕಾಲದಲ್ಲಿ, ಅವರ ಹಣಕಾಸಿನ ಇತಿಮಿತಿಯಲ್ಲಿ ಪರಿಣಿತರಾಗಿ ಕೆಲಸವನ್ನು ಮಾಡಿ ಅನುಭವವನ್ನು ಪಡೆದಿರುವಂಥವರು ಇವತ್ತು ರಾಷ್ಟ್ರಾಧ್ಯಕ್ಷರಾಗಿದ್ದಾರೆ. ವಿಶ್ವದಲ್ಲೇ ನಮ್ಮ ಸವಾಲೇನಿದೆ, ಆ ಸವಾಲಿಗೆ ಪ್ರತ್ಯುತ್ತರವನ್ನು ಕೊಡುವ ರೀತಿಯಲ್ಲಿ ಆ ಸವಾಲನ್ನು ಸ್ವೀಕರಿಸಿ ಸಂವಿಧಾನದ ಚೌಕಟ್ಟಿನಲ್ಲಿ ಈ ದೇಶವನ್ನು ಮುನ್ನಡೆಸು–ವಂತ ಕೆಲಸವನ್ನು ಮಾಡುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಬಹುಶಃ ಅವರು ರಾಷ್ಟ್ರಾಧ್ಯಕ್ಷರಾಗಿರುವ ಹಿನ್ನೆಲೆಯಲ್ಲಿಯಾದರೂ ಕೂಡಾ ನಮ್ಮ rupee valueಏನು de- value ಆಗಿದೆ, ಇವತ್ತು ನಮಗೆ ಒಂದು ಡಾಲರ್‌ಗೆ ರೂ.56 ರೂಪಾಯಿ ಮೌಲ್ಯ ಆಗಿರುವಾಗ ಈ ದೇಶಕ್ಕೆ ಆರ್ಥಿಕವಾಗಿ ಆಗಿರುವ ನಷ್ಟವನ್ನು ತುಂಬಿಸತಕ್ಕ ಆ ಶಕ್ತಿ ಬರುತ್ತದೆ ಮತ್ತು ಪ್ರಪಂಚದ ಎಲ್ಲಾ ದೇಶಗಳಲ್ಲೂ ಕೂಡಾ ಒಂದು ವಿಶ್ವಾಸ ಮೂಡುತ್ತದೆ ಎನ್ನುವ ಆಶಯ ನನಗಂತೂ ಇದೆ ಎನ್ನುವ ಮಾತನ್ನು ಹೇಳಿ, ಅತ್ಯಂತ ಅನುಭವ ಉಳ್ಳಂಥ ಶ್ರೀ ಪ್ರಣಬ್ ಮುಖರ್ಜಿರವರು

ಇವತ್ತು ರಾಷ್ಟ್ರಾಧ್ಯಕ್ಷರಾಗಿ ಆಯ್ಕೆಯಾದ ಈ ಸಂದರ್ಭದಲ್ಲಿ ಅಭಿನಂದಿಸುವುದರ ಜೊತೆಗೆ ಅವರನ್ನು ಯಾವುದಾದರೊಂದು ಸಂದರ್ಭದಲ್ಲಿ ಇಲ್ಲಿಗೆ ಕರೆತರುವ ಒಂದು ಚಿಂತನೆಯನ್ನು ಸಭಾನಾಯಕರು ಮಾಡಿದರೆ ಒಳ್ಳೆಯದು ಎನ್ನುವ ಮಾತನ್ನು ಹೇಳಿ, ಇದರಲ್ಲಿ ವಿಶೇಷವಾಗಿ ಶ್ರೀಮಾನ್ ಯಡಿಯೂರಪ್ಪನವರು ವ್ಯಕ್ತಪಡಿಸಿದಂತಹ ಮಾತನ್ನು ಸ್ವಾಗತಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ದಿನಾಂಕ:19.07.2012ರಂದು ನಡೆದಂಥ ರಾಷ್ಟ್ರಪತಿ ಚುನಾವಣೆಯಲ್ಲಿ ಮಾನ್ಯ ಶ್ರೀ ಪ್ರಣಬ್ ಮುಖರ್ಜಿರವರು ಈ ದೇಶದ ರಾಷ್ಟ್ರಪತಿಗಳಾಗಿ ಆಯ್ಕೆಯಾಗಿರತಕ್ಕಂತಹದು ನಮ್ಮೆಲ್ಲರಿಗೂ ಸಂತೋಷ ತಂದಿರುವಂಥ ವಿಚಾರವಾಗಿದೆ. ಈಗಾಗಲೇ ಸನ್ಮಾನ್ಯ ಶ್ರೀ ಪ್ರಣಬ್ ಮುಖರ್ಜಿರವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಹೆಚ್. ಡಿ. ರೇವಣ್ಣನವರು, ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಮಾನ್ಯ ಶ್ರೀ ಟಿ.ಬಿ.ಜಯಚಂದ್ರರವರುಗಳು ಅವರ ವ್ಯಕ್ತಿತ್ವದ ಬಗ್ಗೆ ಸಾಕಷ್ಟು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಪತ್ರಿಕೆಯಲ್ಲೂ ಕೂಡ ನಾನು ಓದಿದೆ, ಅವರು ಶಾಲೆಗೆ ಹೋಗುವಾಗ ಬರಿ ಕಾಲಿನಲ್ಲಿ ನಡೆದುಕೊಂಡು ಹೋಗುತ್ತಿದ್ದರು, ಅತ್ಯಂತ ಸರಳ ಸಜ್ಜನಿಕೆಯ, ಮೇಧಾವಿ ವ್ಯಕ್ತಿ. ಹೀಗಾಗಿ ಇಂಥ ಒಬ್ಬ ಪ್ರತಿಭಾವಂತ ವ್ಯಕ್ತಿ ಈ ದೇಶದ ರಾಷ್ಟ್ರಪತಿಗಳಾಗಿ ಆಯ್ಕೆಯಾಗಿರುವುದನ್ನು ನಾವೆಲ್ಲರೂ ಸ್ವಾಗತಿಸಬೇಕು. ಇವತ್ತು ಇಡೀ ಈ ಸದನ ಅವರು ಆಯ್ಕೆಯಾಗಿರುವುದನ್ನು ಅಭಿನಂದಿಸಿ, ಆ ಅಭಿನಂದನಾ ನಿರ್ಣಯವನ್ನು ರಾಷ್ಟ್ರಪತಿಗಳಾಗಿ 25ನೇ ತಾರೀಖಿನಂದು ಪ್ರಮಾಣ ವಚನ ಸ್ವೀಕರಿಸಲಿರುವ ಶ್ರೀ ಪ್ರಣಬ್ ಮುಖರ್ಜಿಯವರಿಗೆ ಕಳುಹಿಸಿ ಕೊಡಲಾಗುವುದು.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಜಯಚಂದ್ರರವರು ಮಾತನಾಡಿದಂಥ ಸಂದರ್ಭದಲ್ಲಿ ಒಂದು ಭಾವನೆಯನ್ನು ವ್ಯಕ್ತಪಡಿಸಿದರು. ಏನೆಂದರೆ, ಯಾವುದಾದರೊಂದು occasionನಲ್ಲಿ ನೂತನವಾಗಿ ಆಯ್ಕೆಯಾಗಿರುವ ರಾಷ್ಟ್ರಪತಿಗಳನ್ನು ಕರೆಸಬೇಕು ಎಂದು ಹೇಳಿದರು. ಅದಕ್ಕೆ ಒಂದು ಅವಕಾಶವಿದೆ, ನಮ್ಮ ಬೆಳಗಾವಿಯ ಸುವರ್ಣಸೌಧ ಉದ್ಘಾಟನೆಗೆ ಕಾಯುತ್ತಿದೆ. ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಿನಲ್ಲಿ ಉದ್ಘಾಟನೆ ಹಮ್ಮಿಕೊಂಡು ನೂತನ ರಾಷ್ಟ್ರಪತಿಯವರನ್ನು ಈ ಕಾರ್ಯಕ್ರಮಕ್ಕೆ ಕರೆಸಿದರೆ ಒಳ್ಳೆಯದಾಗುತ್ತದೆ. ಅದಕ್ಕೆ ನಾವು ಅವರಿಗೆ

ಆಮಂತ್ರಣವನ್ನು ಕೊಡುತ್ತೇವೆ, ಅವರು ಬರುವಂತಾಗಲಿ ಎಂದು ನಾನು ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋಧ ಪಕ್ಷದ ನಾಯಕರು): ಬಹಳ ಒಳ್ಳೆಯದು.

5. ನಿಯಮ-69ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ

ವಿಷಯ: ರಾಜ್ಯದಲ್ಲಿ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಟಿ.ಬಿ.ಜಯಚಂದ್ರ(ಸಿರಾ): ಮಾನ್ಯ ಸಭಾಧ್ಯಕ್ಷರೆ, ನಾವು ಮಾತನಾಡ-ಬೇಕಾದಾಗ ಕೋರಂನ ಅಭಾವ ಇರುವುದರಿಂದ ಮಾತನಾಡುವುದು ಬೇಡ ಎಂದು ಹೇಳಿ ಇವತ್ತಿಗೆ ಚರ್ಚೆಯನ್ನು ಮುಂದುವರೆಸುತ್ತಿದ್ದೇವೆ. ಈ ಮಧ್ಯೆ ಒಂದು ವಿಚಾರ ನಾನು ಹೇಳಬೇಕಾಗಿದೆ, ನಾನು ಚರ್ಚೆಯನ್ನು ಪ್ರಾರಂಭಿಸಿ ಇವತ್ತು ರಾಜ್ಯದ ಪರಿಸ್ಥಿತಿ ಏನು ಎನ್ನುವುದನ್ನು ಸರ್ಕಾರಕ್ಕೆ ನಾವು ಮನದಟ್ಟು ಮಾಡುವುದಕ್ಕಿಂತ ಪೂರ್ವದಲ್ಲಿ ಉಪ ಮುಖ್ಯಮಂತ್ರಿಗಳು, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರಾಗಿದ್ದಂತಹ ಶ್ರೀ ಈಶ್ವರಪ್ಪನವರು ನಿನ್ನೆ ಮತ ಕ್ಷೇತ್ರಕ್ಕೆ ಬಂದಿದ್ದರು. ಮತಕ್ಷೇತ್ರಕ್ಕೆ ಬಂದಾಗ ಅದನ್ನು ಅಧ್ಯಯನ ಮಾಡಿ ವಾಸ್ತವಿಕವಾಗಿರತಕ್ಕ ಸಂಗತಿ ಏನು ಎಂದು ಅರ್ಥ ಮಾಡಿಕೊಂಡು ನಾವು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ರಾತ್ರಿ 9-30ರವರೆಗೂ ಸಭೆಯನ್ನು ನಡೆಸಿದೆವು. ಎಲ್ಲಾ ಅಧಿಕಾರಿಗಳನ್ನು ಕರೆದು ಚರ್ಚೆಯನ್ನು ಮಾಡಿ ಸಭೆಯನ್ನು ಮಾಡಿದೆವು. ಸಭೆಯನ್ನು ಮಾಡಿದ ಕೊನೆಯಲ್ಲಿ ನನಗೆ ಬಹಳ ಸಂತೋಷವಾಗಿತ್ತು. ಆ ಸಂತೊಷವನ್ನು ನಾನು ಸಭೆಯಲ್ಲಿ ವ್ಯಕ್ತಪಡಿಸಿದೆ. ಇವತ್ತು ಶ್ರೀ ಈಶ್ವರಪ್ಪನವರು ಎಷ್ಟು ತಾಳ್ಮೆಯಿಂದ ಕುಳಿತು ವಿಚಾರವನ್ನು ಚರ್ಚೆ ಮಾಡುತ್ತಿದ್ದಾರೆ ಮತ್ತು ಆ ಕಳಕಳಿ ವ್ಯಕ್ತಪಡಿಸುತ್ತಿದ್ದಾರೆ ಎನ್ನುವುದನ್ನು ಕೂಡ ಮೆಚ್ಚುಗೆಯಿಂದ ಮಾತನಾಡಿದೆ. ಬಹುಶಃ ಆ ರೀತಿಯಾದ ಕಳಕಳಿ, ಮತ್ತು ತಾಳ್ಮೆಯನ್ನು ಕೂಡ ಇಲಾಖೆಯ ಜವಾಬ್ದಾರಿಯನ್ನು ಹೊತ್ತಂಥವರಿಗೆ ಇರಬೇಕಾಗುತ್ತದೆ, ಅದನ್ನು ಮೈಗೂಡಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೀರಿ, ಅದನ್ನು ಮಾಡಿ ಬಹಳ ಸಂತೋಷ. ನಿನ್ನೆ ನೀವು ಮಾತನಾಡುವಂತಹ ಸಂದರ್ಭದಲ್ಲಿ ನನಗೆ ಬಹಳ ಮುಖ್ಯವಾಗಿ ಕೆಲವು ಅಂಶಗಳು ನನ್ನ ಗಮನಕ್ಕೆ ಬರುತ್ತಿದ್ದವು. ನೀವುಮಾತಿನ ಪ್ರತಿ ಹಂತದಲ್ಲಿ ಕೂಡ ಒಂದು ಮಾತನ್ನು ಹೇಳುತ್ತಿದ್ದೀರಿ, ಮುಂದಿನ ಕುಡಿಯುವ ನೀರಿನ ಸಮಸ್ಯೆ ಹೇಗೆ